# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-3802/2014/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001
ದಿನಾಂಕ:08-01-2018

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

**ವಿಷಯ:** ದೂರುದಾರರಾದ ಶ್ರೀ ಹೆಚ್.ಜಿ. ವೀರಭದ್ರಪ್ಪ, ವಾಸ: ಪಿ. ಹೊಸಹಳ್ಳಿ ಗ್ರಾಮ, ಮಾಡಬಾಳು ಅಂಚೆ, ಅರಸೀಕರೆ ತಾಲ್ಲೂಕು, ಹಾಸನ ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಮೇಲೆ ಕ್ರಮವನ್ನು ಕೈಗೊಳ್ಳುವ ಬಗ್ಗೆ

****

ಈ ದೂರನ್ನು ಶ್ರೀ ಹೆಚ್.ಜಿ. ವೀರಭದ್ರಪ್ಪ, ವಾಸ: ಪಿ. ಹೊಸಹಳ್ಳಿ ಗ್ರಾಮ, ಮಾಡಬಾಳು ಅಂಚೆ, ಅರಸೀಕರೆ ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಹೆಚ್.ಆರ್. ಮುರಳಿಧರ, ಹಿಂದಿನ ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಉಪ-ವಿಭಾಗ, ಅರಸೀಕರೆ, ಹಾಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮೈಸೂರು ಮಹಾನಗರ ಪಾಲಿಕೆ, ಝೋನ್, ಗಾಯತ್ರಿಪುರಂ, ಮೈಸೂರು, (2) ಶ್ರೀ ಸಿ.ಎಲ್. ತಿರುಮಲ ಸ್ವಾಮಿ, ನಿವೃತ್ತ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಉಪ-ವಿಭಾಗ, ಅರಸೀಕರೆ, ಹಾಸನ ಜಿಲ್ಲೆ ಮತ್ತು ಹಾಲಿ ವಾಸ: ತಿರುಮಲ ನಿಲಯ, ಹೊಸ ಬಸ್ ನಿಲ್ದಾಣದ ಎದುರು, ಚನ್ನರಾಯಪಟ್ಟಣ, ಹಾಸನ ಜಿಲ್ಲೆ ಹಾಗೂ (3) ಶ್ರೀ ಹೆಚ್.ಸಿ. ರಾಮಚಂದ್ರಪ್ಪ, ಹಿಂದಿನ, ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ವಿಭಾಗ, ಹಾಸನ ಮತ್ತು ಹಾಲಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ವಿಭಾಗ, ಮಂಡ್ಯ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ್ದಾರೆ.

2. **ದೂರಿನ ಸಂಕ್ಷಿಪ್ತ ವಿವರ:**

ಅರಸೀಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸೈದರಹಳ್ಳಿ ಹಾಗೂ ಹರಳಕಟ್ಟೆ ಗ್ರಾಮಗಳಿಗೆ ಎಸ್.ಸಿ.ಪಿ ಯೋಜನೆಯಲ್ಲಿ ಸರ್ಕಾರದಿಂದ ರೂ.30 ಲಕ್ಷಗಳಿಗೂ ಹೆಚ್ಚು ಹಣ ಮಂಜೂರು ಆಗಿದ್ದು, ರಸ್ತೆ ಡಾಂಬರೀಕರಣ ಮತ್ತು ಕಾಂಕ್ರೀಟ್ ರಸ್ತೆಯ ನಿರ್ಮಾಣದ ಕಾರ್ಯಗಳಲ್ಲಿ ಎದುರುದಾರರು ಬಾರಿ ಅವ್ಯವಹಾರ ಮಾಡಿರುತ್ತಾರೆ ಮತ್ತು ಈ ಕಾಮಗಾರಿಗಳು ಕಳಪೆಯಾಗಿವೆ ಅಂತ ಆಪಾದಿಸಿದ್ದಾರೆ.

Sd/-

15

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿರುವ ಎಲ್ಲಾ ಅಂಶಗಳನ್ನು ಅಲ್ಲಗಳೆದು, ತಮ್ಮ ಅವಧಿಯಲ್ಲಿ ಹರಳಕಟ್ಟೆಯ ಪರಿಶಿಷ್ಠ ಜಾತಿ ಕಾಲೋನಿಯ ಕಾಂಕ್ರಿಟ್ ರಸ್ತೆ ನಿರ್ಮಾಣದ ಕಾಮಗಾರಿ ಆಗಿದೆ, ಅದನ್ನು ಸರಿಯಾಗಿ ನಿರ್ವಹಿಸಲಾಗಿದೆ. ಉಳಿದ ಕಾಮಗಾರಿಗಳು ನನ್ನ ಅವಧಿಯಲ್ಲಿ ಆಗಿಲ್ಲ ಅಂತ ತಿಳಿಸಿದ್ದಾರೆ.

(ಬಿ) 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ನಿರ್ವಹಿಸಿದ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ನಿರ್ವಹಿಸಲಾಗಿದ್ದು, ಯಾವುದೇ ದೋಷಪುರಿತ ಇಲ್ಲವೇ ಕಳಪೆ ಕಾಮಗಾರಿ ಮಾಡಿಲ್ಲ ಅಂತ ತಿಳಿಸಿದ್ದಾರೆ.

4. ಎದುರುದಾರರು ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಈ ಪ್ರಕರಣದಲ್ಲಿ ತನಿಖೆಯನ್ನು ಕೈಗೊಳ್ಳಬೇಕೆಂದು ಕೋರಿರುತ್ತಾರೆ.

5. ಈ ಪ್ರಕರಣದ ತನಿಖೆಯನ್ನು ಮುಖ್ಯ ಇಂಜಿನಿಯರ್, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಲಾಗಿತ್ತು.

6. ಅದರಂತೆ, ಮುಖ್ಯ ಇಂಜಿನಿಯರ್, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಈ ಪ್ರಕರಣದಲ್ಲಿ ತನಿಖೆಯನ್ನು ಮಾಡಿಸಿ, ವರದಿಯನ್ನು ಸಲ್ಲಿಸಿದ್ದಾರೆ.

7. ತನಿಖಾ ವರದಿಯಲ್ಲಿ, ತನಿಖಾಧಿಕಾರಿಗಳು ಈ ಪ್ರಕರಣದಲ್ಲಿ ದೂರುದಾರರು ಆರೋಪಿಸಿರುವ 6 ಕಾಮಗಾರಿಗಳನ್ನು ಪರಿಶೀಲನೆ ಮಾಡಿದ್ದಾರೆ. ಐದು ಕಾಮಗಾರಿಗಳಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಿಲ್ಲ ಅಂತ ಅಭಿಪ್ರಾಯಪಟ್ಟಿರುತ್ತಾರೆ.

(ಎ) ಮುಂದುವರೆದು, 6ನೇ ಕಾಮಗಾರಿಯಾದ ಅರಸೀಕೆರೆ ತಾಲ್ಲೂಕಿನ ಬಿ.ಹೆಚ್. ರಸ್ತೆಯಿಂದ ಸೈದರಹಳ್ಳಿಗೆ ಸೇರುವ ರಸ್ತೆಯ ಅಭಿವೃದ್ಧಿ, ಗ್ರಾಮದೊಳಗಿನ ಸಿ.ಸಿ.ರಸ್ತೆಯ ಭಾಗ ಇವುಗಳನ್ನು ಅನುಮೋದಿತ ಅಂದಾಜು ಪಟ್ಟಿ ಹಾಗೂ ಅಳತೆ ಪುಸ್ತಕದಲ್ಲಿ ದಾಖಲಿಸಿರುವ ಪ್ರಕಾರ 420 ಮೀಟರ್ ಉದ್ದಕ್ಕೆ ಸಿ.ಸಿ. ರಸ್ತೆಯನ್ನು ಅಳವಡಿಸಿದ್ದು, ತನಿಖೆಯಲ್ಲಿ ಅಳತೆ ಮಾಡಿದಾಗ ಒಟ್ಟು 356.20 ಮೀಟರ್ ಮಾತ್ರ ಸಿ.ಸಿ. ರಸ್ತೆ ನಿರ್ಮಿಸಿರುವುದು ಕಂಡುಬಂದಿರುತ್ತದೆ. ರಸ್ತೆಯ ಅಗಲವು

ವಿವಿಧ ಭಾಗಗಳಲ್ಲಿ ಬೇರೆ-ಬೇರೆಯಾಗಿವೆ. ಎದುರುದಾರರು ಕಾಮಗಾರಿಯನ್ನು ಸರಿಯಾಗಿ ಅಳತೆ ಮಾಡಿಲ್ಲ. ಹಾಗೆಯೇ ಪುಸ್ತಕದಲ್ಲಿ ದಾಖಲಿಸಿರುವುದು ಕಂಡುಬಂದಿದೆ. ನಷ್ಟದ ಲೆಕ್ಕಾಚಾರ ಮಾಡಲಾಗಿ ರೂ.1,43,550/- ಆಗುತ್ತದೆ. ಈ ನಷ್ಟಕ್ಕೆ ಅಂದಿನ ಸಹಾಯಕ ಇಂಜಿನಿಯರ್ ಶ್ರೀ ಹೆಚ್.ಆರ್. ಮುರಳಿಧರ ಹಾಗೂ ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ರೀ.ಸಿ.ಎಲ್. ತಿರುಮಲ್ ಸ್ವಾಮಿ, ಮತ್ತು ಅಂದಿನ ಕಾರ್ಯಪಾಲಕ ಇಂಜಿನಿಯರ್ ಹೆಚ್.ಸಿ. ರಾಮಚಂದ್ರಪ್ಪ, ಲೋಕೋಪಯೋಗಿ ವಿಭಾಗ, ಹಾಸನ ಇವರುಗಳು ಕಾರಣಿಭೂತರಾಗಿದ್ದಾರೆ ಅಂತ ವರದಿ ಸಲ್ಲಿಸಿದ್ದಾರೆ.

8. ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ 420 ಮೀಟರ್ ಸಿ.ಸಿ. ರಸ್ತೆಯ ಒಂದು ಕಾಮಗಾರಿಯಲ್ಲಿ ಸರ್ಕಾರಕ್ಕೆ ನಷ್ಟ ಮಾಡಿದ್ದಾರೆ ಎನ್ನಲಾದ ವರದಿಯಲ್ಲಿ ನಮೂದಿಸಿದ 3 ಅಧಿಕಾರಿಗಳನ್ನು 1 ರಿಂದ 3ನೇ ಎದುರುದಾರರನ್ನಾಗಿ ಸೇರ್ಪಡೆ ಮಾಡಿಕೊಂಡು ಅವರಿಂದ ಆಕ್ಷೇಪಣೆಯನ್ನು ಕೇಳಲಾಗಿದೆ.

9. 1 ರಿಂದ 3ನೇ ಎದುರುದಾರರು ತನಿಖಾ ವರದಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಅದರಲ್ಲಿ 5 ವರ್ಷಗಳ ನಂತರ ಸ್ಥಳ ಪರಿಶೀಲನೆ ಆಗಿರುವುದರಿಂದ, ಮತ್ತು ಆರ್ಥಿಕ ನಷ್ಟವನ್ನು ಯಾವುದೇ ಅಳತೆ ಗೋಲು ಇಲ್ಲದೇ ನಿರ್ದಿಷ್ಟಪಡಿಸಿರುವುದರಿಂದ, ಕೋಡಲ್ ನಿಯಮಗಳ ಪ್ರಕಾರ ಆರ್ಥಿಕ ನಷ್ಟವನ್ನು ಗುತ್ತಿಗೆದಾರರರು ಬರಿಸಬೇಕಾಗುತ್ತದೆ. ಆದ್ದರಿಂದ, ತನಿಖಾ ವರದಿಯನ್ನು ತಿರಸ್ಕರಿಸಲು ಮತ್ತು ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

10. ಈ ಪ್ರಕರಣದ ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಿದ್ದೇನೆ. ತನಿಖಾಧಿಕಾರಿಗಳು, 6ನೇ ಕಾಮಗಾರಿಯಾದ ಅರಸೀಕೆರೆ ತಾಲ್ಲೂಕಿನ ಬಿ.ಹೆಚ್. ರಸ್ತೆಯಿಂದ ಸೈದರಹಳ್ಳಿಗೆ ಸೇರುವ ರಸ್ತೆಯ ಅಭಿವೃದ್ಧಿ, ಗ್ರಾಮದೊಳಗಿನ ಸಿ.ಸಿ.ರಸ್ತೆಯ ಭಾಗ ಇವುಗಳನ್ನು ಅನುಮೋದಿತ ಅಂದಾಜು ಪಟ್ಟಿ ಹಾಗೂ ಅಳತೆ ಪುಸ್ತಕದಲ್ಲಿ ದಾಖಲಿಸಿರುವ ಪ್ರಕಾರ 420 ಮೀಟರ್ ಉದ್ದಕ್ಕೆ ಸಿ.ಸಿ. ರಸ್ತೆಯನ್ನು ಅಳವಡಿಸಿದ್ದು, ತನಿಖೆಯಲ್ಲಿ ಅಳತೆ ಮಾಡಿದಾಗ ಒಟ್ಟು 356.20 ಮೀಟರ್ ಮಾತ್ರ ಸಿ.ಸಿ. ರಸ್ತೆ ನಿರ್ಮಿಸಿರುವುದು ಕಂಡುಬಂದಿರುತ್ತದೆ. ರಸ್ತೆಯ ಅಗಲವು ವಿವಿಧ ಭಾಗಗಳಲ್ಲಿ ಬೇರೆ-ಬೇರೆಯಾಗಿವೆ. ಎದುರುದಾರರು ಕಾಮಗಾರಿಯನ್ನು ಸರಿಯಾಗಿ ಅಳತೆ ಮಾಡಿಲ್ಲ. ಹಾಗೆಯೇ ಪುಸ್ತಕದಲ್ಲಿ ದಾಖಲಿಸಿರುವುದು ಕಂಡುಬಂದಿದೆ. ನಷ್ಟದ ಲೆಕ್ಕಾಚಾರ ಮಾಡಲಾಗಿ ರೂ.1,43,550/- ಆಗುತ್ತದೆ ಅಂತ ಅಭಿಪ್ರಾಯಪಟ್ಟಿರುತ್ತಾರೆ.

Sd/-



16

11. ಆದ್ದರಿಂದ, 6ನೇ ಕಾಮಗಾರಿಯಾದ ಅರಸೀಕೆರೆ ತಾಲ್ಲೂಕಿನ ಬಿ.ಹೆಚ್. ರಸ್ತೆಯಿಂದ ಸೈದರಹಳ್ಳಿಗೆ ಸೇರುವ ರಸ್ತೆಯ ಅಭಿವೃದ್ಧಿ, ಗ್ರಾಮದೊಳಗಿನ ಸಿ.ಸಿ.ರಸ್ತೆಯ ಕಾಮಗಾರಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟವಾಗಿರುವ ರೂ. 1,43,550/- ಗಳನ್ನು ವಸೂಲಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ತೆಗೆದುಕೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರ ಅಡಿಯಲ್ಲಿ ಎದುರುದಾರರ ಶಿಸ್ತುಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡಲಾಗಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

9.1.18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ